ನರೇಂದ್ರ ಪೈ

# ಕಥನ ತಂತ್ರದ ಹೊಸ ನುಡಿಗಟ್ಟುಗಳು

ಜೀವನಾನುಭವದಿಂದ ಹುಟ್ಟಿದ ಪ್ರಬುದ್ಧತೆ ಮತ್ತು ಒಂದು ಕಲಾ ಮಾಧ್ಯಮವಾಗಿ ಕಥನದ ಮರ್ಮವನ್ನು ಅರಿಯುವ ಪ್ರಾಮಾಣಿಕ ಕುತೂಹಲ ಎರಡನ್ನೂ ಇಟ್ಟುಕೊಂಡು ಬರೆಯಬಲ್ಲ ಲೇಖಕಿಯರು ಹೊಸ ತಲೆಮಾರಿನಲ್ಲಿ ಕಂಡುಬರುತ್ತಿಲ್ಲ ಅನಿಸುವಾಗಲೇ ಛಾಯಾ ಭಟ್ ಅವರ 'ಬಯಲರಸಿ ಹೊರಟವಳು' ಕಥಾಸಂಕಲನ ಈ ಪೂರ್ವಗ್ರಹವನ್ನು ಮೀರಿ ಹುಟ್ಟಿಸುವ ಮೆಚ್ಚುಗೆ ಮತ್ತು ಅಭಿಮಾನ ಉಲ್ಲೇಖನೀಯ. ಲೇಖಕಿ ಎನ್ನುವ, ಮೊದಲ ಸಂಕಲನ ಎನ್ನುವ ಯಾವುದೇ ರಿಯಾಯ್ತಿಯನ್ನು ಸಾರಾಸಗಟಾಗಿ ತಿರಸ್ಕರಿಸಿ ನಿಲ್ಲುವ ಈ ಕತೆಗಳು ಬದಲಾವಣೆಯ ಹೊಸ ಹೊಳಹುಗಳನ್ನು ಮೈದುಂಬಿಕೊಂಡು ಬಂದಿವೆ.

ಕಥನದ ಕಲ್ಪಿತವಾಸ್ತವವನ್ನು ಸಾಧ್ಯವಾದಷ್ಟೂ ಹೆಚ್ಚು ವಾಸ್ತವಿಕ ನೆಲೆಗೆ ಹಚ್ಚುವ ಒಂದು ಪ್ರಯತ್ನ ಬಹುಶಃ ಈ ಹೊತ್ತಿನ ಎಲ್ಲ ಕತೆಗಾರರದ್ದು. ಅದಕ್ಕಾಗಿ ಅವರು ರಮ್ಯ, ಸುಂದರ, ಹಿತಾನುಭವದ ಪ್ರತಿಮೆಗಳನ್ನು, ಭಾಷೆಯನ್ನು ಬೇಕಂತಲೇ ಬಿಟ್ಟುಕೊಟ್ಟು ಹೆಚ್ಚು ಹೆಚ್ಚಾಗಿ ''ದೈನಂದಿನದ ಕ್ಷುದ್ರತೆ''ಯನ್ನು ತಮ್ಮ ಕತೆಯ ವಿವರಗಳಲ್ಲಿ ತರುತ್ತಿರುವುದನ್ನು ಕಾಣುತ್ತೇವೆ. ಸಾಮಾನ್ಯವಾಗಿ ಕವಿತೆಗಳತ್ತ ಒಲಿಯುವ ಮತ್ತು ಕಥೆಗಳನ್ನೂ ಕವಿತೆಗಳಂತೆ ಕಟ್ಟುವ ಲೇಖಕಿಯರು ಅದರಲ್ಲೂ ವಿಶೇಷತಃ ಉತ್ತರ ಕನ್ನಡದ ಬರಹಗಾರರು ಇದುವರೆಗೂ ಈ ಹಾದಿ ತುಳಿದಿದ್ದು ಕಡಿಮೆ. ಛಾಯಾ ಭಟ್ ಮೊದಲ ಬಾರಿಗೆ ತಮ್ಮ ಕಥೆಗಳನ್ನು ಪ್ರಜ್ಞಾಪೂರ್ವಕವಾಗಿ ಅಂಥ ''ದೈನಂದಿನದ ಕ್ಷುದ್ರತೆ''ಯ ನೆಲೆಯಲ್ಲೇ ಕಟ್ಟಿರುವುದು ವಿಶೇಷವಾಗಿ ಗಮನ ಸೆಳೆಯುತ್ತದೆ.

ಈ 'ದೈನಂದಿನದ ಕ್ಷುದ್ರತೆ' ಮೊದಲಿಗೆ ಚರ್ಚಿಸಲ್ಪಟ್ಟಿದ್ದು ಯು.ಆರ್. ಅನಂತಮೂರ್ತಿಯವರ 'ಅವಸ್ಥೆ' ಕಾದಂಬರಿಯಲ್ಲಿ. ಅಣ್ಣಾಜಿಯೊಂದಿಗೆ ಕೃಷ್ಣಪ್ಪ ನಡೆಸುವ ಚರ್ಚೆಯಲ್ಲಿ ಬರುತ್ತದೆ ಅದು. ಇಲ್ಲಿನ ಕತೆಗಳಲ್ಲಿ ಕಟ್ಟಿಕೊಡುವ ವಿವರಗಳಲ್ಲಿ ಛಾಯಾ ಭಟ್ ಅವರು ಬೇಕಂತಲೇ ಮುಟ್ಟಿನ ಬಟ್ಟೆ, ವಾಂತಿಯ ದುರ್ಗಂಧ, ಹೇಲು–ಉಚ್ಚೆಯ ವಾಸನೆ, ಗಂಡಿನ ಲೈಂಗಿಕ ವಾಂಛೆಗಳು, ಬಾಣಂತನದ ವಾಸನೆ, ತೇಗಿನ ದುರ್ಗಂಧ ಎಲ್ಲವನ್ನೂ ಸ್ವಲ್ಪ ಢಾಳಾಗಿ ತರುತ್ತಾರೆ. ಎಲ್ಲಿಯವರೆಗೆಂದರೆ, ಸುಧಾಕರನನ್ನು